




# ಶ್ರೀರಾಮಕೃಷ್ಣ ಮಿಷನ್ನಿನ ಇತ್ತೀಚಿನ ಚಟುವಟಿಕೆಗಳು

ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖವಾಗಿ ನಡೆದ ಕಾರ್ಯಕ್ರಮಗಳೆಂದರೆ, ಶ್ರೀಮಾತೆ ಶಾರದಾದೇವಿಯರ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ. ಬಹುತೇಕ ಎಲ್ಲ ಕೇಂದ್ರಗಳೂ ಈ ವಾರ್ಷಿಕ ಉತ್ಸವಗಳನ್ನು ಅತ್ಯಂತ ವೈಭವದಿಂದ ಆಚರಿಸಿದವು. ಇದಲ್ಲದೆ, ಜನವರಿ ೧೨ ರಂದು 'ರಾಷ್ಟ್ರೀಯ ಯುವ ದಿನಾಚಾರಣೆ' ಯನ್ನು ಕೂಡ ಎಲ್ಲ ಕೇಂದ್ರಗಳು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಿದವು. ಈ ಕಾರ್ಯಕ್ರಮಗಳೊಂದಿಗೆ, ಈ ಕೆಳಗಿನ ಇತರ ಚಟುವಟಿಕೆಗಳು ಉಲ್ಲೇಖನೀಯ:

**೧) ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ**

ಈ ಕೇಂದ್ರಗಳು ವಿವಿಧ ಕಾರ್ಯಕ್ರಮಗಳೊಂದಿಗೆ ವಾರ್ಷಿಕೋತ್ಸವವನ್ನು ಆಚರಿಸಿವೆ:

**ಅದ್ವೈತ ಆಶ್ರಮ,** ಕೋಲ್ಕತ್ತ : ('ಪ್ರಬುದ್ಧ ಭಾರತ' ವಿಶೇಷ ಸಂಚಿಕೆ); **ಅಸನ್‌ಸೋಲ್, ಬರಿಷಾ, ಬಸವನಗುಡಿ,** ಬೆಂಗಳೂರು, (ಪ್ರವಚನ ಹಾಗೂ ಚಿತ್ರ ಪ್ರದರ್ಶನ); **ಚೆಂಗಂ, ಹತಮನಿಗುಡ, ಝಾರ್‌ಗ್ರಾಮ್** (ರಥಯಾತ್ರೆ ); **ಕಸುಂಡಿಯಾ, ವಿವೇಕನಗರ,** ಅಗರ್ತಲಾ; **ಬಾಗೇರ್ ಹಾಟ್,** ಬಾಂಗ್ಲಾದೇಶ.

**೨) ವಿವಿಧ ಶಾಖಾಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮಗಳು (ಭಾರತದಲ್ಲಿ )**

**ವಿಶಾಖಪಟ್ಟಣ:** ಆಶ್ರಮ ನಡೆಸುವ ಪ್ರೌಢಶಾಲೆಯಲ್ಲಿ ಹೊಸ ತರಗತಿ ಕಟ್ಟಡದ ಉದ್ಘಾಟನೆ-ಶ್ರೀಮತ್ ಸ್ವಾಮಿ ಸುಹಿತಾನಂದಜಿ ಯವರಿಂದ.

**ಟಾಕಿ:** ಸ್ವಾಮಿ ವಿವೇಕಾನಂದರ ಕಂಚಿನ ವಿಗ್ರಹದ ಉದ್ಘಾಟನೆ – ಶ್ರೀ ಪಾರ್ಥ ಭೌಮಿಕ್, ಪಶ್ಚಿಮಬಂಗಾಳ ಸರ್ಕಾರದ ನೀರಾವರಿ ಸಚಿವರಿಂದ.

**ಪೋರ್‌ಬಂದರ್:** ಯುವ ಸಮ್ಮೇಳನ, ಆಧ್ಯಾತ್ಮಿಕ ಶಿಬಿರ, ಭಜನೆ ಸಂಗೀತ ಇತ್ಯಾದಿ.

**ವಿವೇಕ ತೀರ್ಥ:** 'ಸೆಂಟರ್ ಫೋರ್ ಹ್ಯೂಮನ್ ಎಕ್ಸೆಲೆನ್ಸ್ ಅಂಡ್ ಸೋಶಿಯಲ್ ಸೈನ್ಸಸ್'ನ ಉದ್ಘಾಟನೆ ನಡೆಯಿತು. ಪೂಜ್ಯ ಪರಮಾಧ್ಯಕ್ಷರಾದ ಸ್ವಾಮಿ ಸ್ಮರಣಾನಂದಜಿ, ಉಪಾಧ್ಯಕ್ಷರುಗಳಾದ ಸ್ವಾಮಿ ಗೌತಮಾನಂದಜಿ, ಸುಹಿತಾನಂದಜಿ, ಭಜನಾನಂದಜಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಭಾಗವಹಿಸಿದ್ದರು.

**ಸೇವಾ ಪ್ರತಿಷ್ಠಾನ:** ಗಂಗಾಸಾಗರ ಮೇಳದ ಉತ್ಸವದಲ್ಲಿ ಚಿಕಿತ್ಸಾಲಯವು ವೈದ್ಯಕೀಯ ಸೇವೆಯನ್ನು ನಡೆಸಿತು. **ಮಾನಸ ದ್ವೀಪ** ಕೇಂದ್ರ, ಕೂಡ ಹಲವು ಮಂದಿ ಯಾತ್ರಾರ್ಥಿಗಳಿಗೆ ವಸತಿ ಇತ್ಯಾದಿಗಳನ್ನು ನೀಡಿತು.

**ಬಾಗ್‌ಬಜಾರ್** ಕೇಂದ್ರವು ಜನವರಿ ೧೫ರಂದು 'ಉದ್ಬೋಧನ' ಪತ್ರಿಕೆಯ ೧೨೫ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಪ್ರಸಿದ್ಧ ಲೇಖಕರುಗಳು ಹಾಗೂ ಸಂನ್ಯಾಸಿಗಳು ಈ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದರು.

**ಅಸನ್ಸೋಲ್ ಕೇಂದ್ರ**ದ ಐಟಿಐ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಅನಾವರಣಗೊಳಿಸಲಾಯಿತು.

**ನರೋತ್ತಮ ನಗರ**-ಕೇಂದ್ರದಲ್ಲಿ ಇಡೀ ವರ್ಷ ಆಚರಿಸುವ ಸುವರ್ಣ ಮಹೋತ್ಸವದ ಅಂಗವಾಗಿ ಸಾರ್ವಜನಿಕ ಸಭೆ ನಡೆಯಿತು.

**ವಿದೇಶಗಳಲ್ಲಿ**

ಬಾಂಗ್ಲಾದೇಶದ ಜಶೋರ್ ಕೇಂದ್ರದ ಉಪಕೇಂದ್ರವಾದ ನರೈಲ್‌ನಲ್ಲಿ ಹೊಸ ಡಿಸ್ಪೆನ್ಸರಿ ಕಟ್ಟಡವನ್ನು ಉದ್ಘಾಟಿಸಲಾಯಿತು.





Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020